# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ ಇವರು ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:-

ವಿಜಯಪುರ ಜಿಲ್ಲೆಯ ವಿಜಯಪುರ ನಗರದಲ್ಲಿ ರಸ್ತೆಗಳು ಹಾಳಾಗಿದ್ದು, ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ರಸ್ತೆಗಳ ಅಭಿವೃದ್ಧಿಗಾಗಿ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯಬಯಸುತ್ತೇನೆ.

******

**ಉತ್ತರ:-** ವಿಜಯಪುರ ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ 24*7 ಕುಡಿಯುವ ನೀರಿನ ಕಾಮಗಾರಿ ಪ್ರಗತಿಯಲ್ಲಿದ್ದು, ಅಮೃತ ಯೋಜನೆ ಅಡಿಯಲ್ಲಿ ಒಳಚರಂಡಿ ಕೊಳವೆ ಹಾಕಿದ್ದರಿಂದ ಹಾಗೂ ಕಳೆದ ಎರಡು ವರ್ಷಗಳಿಂದ ಆಗುತ್ತಿರುವ ಭಾರಿ ಮಳೆಯಿಂದಾಗಿಯೂ ಹಲವು ರಸ್ತೆಗಳು ಹಾಳಾಗಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ. ಸದರಿ ಹಾಳಾದ ರಸ್ತೆಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿಜಯಪುರ ವತಿಯಿಂದ ರಸ್ತೆ ದುರಸ್ತಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಡಾಂಬರೀಕರಣದ ಮತ್ತು ಡಾಂಬರ ಪ್ಯಾಚ್ ಮಾಡುವ ಮೂಲಕ ರಸ್ತೆಗಳ ಸುಧಾರಣೆ ಕಾಮಗಾರಿಗಳನ್ನು ಮಳೆಗಾಲದ ನಂತರ ಪ್ರಾರಂಭಿಸಲಾಗುವುದು.

ವಿಜಯಪುರ ನಗರದಲ್ಲಿ ಒಟ್ಟು 812.00 ಕಿ.ಮೀ. ರಸ್ತೆಗಳಿದ್ದು, ಅದರಲ್ಲಿ 631.00 ಕಿ.ಮೀ. ರಸ್ತೆಗಳಿಗೆ ಡಾಂಬರೀಕರಣ ಮತ್ತು ಕಾಂಕ್ರಿಟ್‌ನಿಂದ ನಿರ್ಮಿಸಿದ ರಸ್ತೆಗಳಾಗಿವೆ. ನಿರ್ಮಾಣ ಮತ್ತು ನಿರ್ವಹಣೆಗೆ ಅಂದಾಜು ಸರಾಸರಿ ಪ್ರತಿ ವರ್ಷಕ್ಕೆ ಸುಮಾರು 475.00 ಲಕ್ಷಗಳು ಖರ್ಚು ಮಾಡಲಾಗುತ್ತಿದೆ.

2011-12ನೇ ಸಾಲಿನಲ್ಲಿ ನಡೆದ ಗುಲ್ಬರ್ಗಾ ಸಚಿವ ಸಂಪುಟದಲ್ಲಿ ವಿಜಯಪುರ ಮಹಾನಗರಪಾಲಿಕೆಗೆ ಅನುದಾನವು ಪ್ರಾರಂಭವಾಗಿರುತ್ತದೆ. ಈ ಅನುದಾನದಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ 186 ಕಾಮಗಾರಿಗಳಿಗೆ ರೂ.4991.55 ಲಕ್ಷಗಳ ಮೊತ್ತದ ಕ್ರಿಯಾ ಯೋಜನೆ ಅನುಮೋದನೆಯಾಗಿದ್ದು, 186 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ರೂ.4257.13 ಲಕ್ಷಗಳು ಖರ್ಚಾಗಿರುತ್ತವೆ.

## 14ನೇ ಹಣಕಾಸು ಆಯೋಗದ ಅನುದಾನ:

ವಿಜಯಪುರ ಮಹಾನಗರಪಾಲಿಕೆಯ ನಗರದ ವ್ಯಾಪ್ತಿಯಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ 14ನೇ ಹಣಕಾಸು ಆಯೋಗದ ಅನುದಾನದಡಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು (ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 42 ಎಸ್‌ಎಫ್‌ಸಿ 2017, ದಿನಾಂಕ 03-04-2017 ಮತ್ತು ಸುತ್ತೋಲೆ ಸಂಖ್ಯೆ: ನಅಇ 46 ಎಸ್‌ಎಫ್‌ಸಿ 2016. ದಿನಾಂಕ 25-02-2016) ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. ಅದರಂತೆ, ಸರ್ಕಾರದಿಂದ ಬಿಡುಗಡೆಯಾಗಿರುವ 14ನೇ ಹಣಕಾಸು ಆಯೋಗದ ಅನುದಾನದಡಿ ಮಹಾನಗರಪಾಲಿಕೆಗೆ ಗರಿಷ್ಠ ಹಂಚಿಕೆಯಾದ ಮೂಲ ಅನುದಾನದ ಗರಿಷ್ಠ ಶೇಕಡ 40 ರಷ್ಟನ್ನು ರಸ್ತೆ ಅಭಿವೃದ್ಧಿಗಾಗಿ ಬಳಸಲು ಅವಕಾಶ ಕಲ್ಪಿಸಲಾಗಿದೆ.

2015-16ನೇ ಸಾಲಿನಿಂದ 2019-20ನೇ ಸಾಲಿನವರೆಗೆ ವಿಜಯಪುರ ಮಹಾನಗರಪಾಲಿಕೆಗೆ ಒಟ್ಟು ಅನುದಾನ ರೂ.77.52 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. ವಿಜಯಪುರ ಮಹಾನಗರಪಾಲಿಕೆಯ 2015-16ನೇ ಸಾಲಿನಿಂದ 2019-20ನೇ ಸಾಲಿನ ವರೆಗೆ 14ನೇ ಹಣಕಾಸು ಆಯೋಗದ ಅನುದಾನದಡಿ ರೂ.897.19 ಲಕ್ಷ ಮೊತ್ತದ 72 ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು 65 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. 7 ಕಾಮಗಾರಿಗಳು ಪ್ರಗತಿಯಲ್ಲಿವೆ.

ವಿವರಗಳು ಈ ಕೆಳಕಂಡಂತಿದೆ:

(ರೂ. ಲಕ್ಷಗಳಲ್ಲಿ)

| ಅನುದಾನದ ವಿವರ | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ವೆಚ್ಚ | ಷರಾ |
|---|---|---|---|---|
| 2015-16 BG | 25 | 204.62 | 170.23 | ಕೈಗೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ |
| 2016-17 BG | 30 | 220.23 | 219.78 | |
| 2016-17 PG | 0 | - | - | |
| 2017-18 BG | 10 | 106.63 | 102.82 | |
| 2017-18 PG | 6 | 54.93 | 32.31 | ಕಾಮಗಾರಿ ಪ್ರಗತಿಯಲ್ಲಿದೆ. |
| 2018-19 BG | 0 | - | - | |
| 2019-20 BG | 1 | 310.78 | 150.23 | |
| **ಒಟ್ಟು** | **72** | **897.19** | **675.37** | |

## 15ನೇ ಹಣಕಾಸು ಆಯೋಗದ ಅನುದಾನ:

ವಿಜಯಪುರ ಮಹಾನಗರಪಾಲಿಕೆಯ ನಗರದ ವ್ಯಾಪ್ತಿಯಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ 15ನೇ ಹಣಕಾಸು ಆಯೋಗದ ಮುಕ್ತ ಅನುದಾನದಡಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಹಂಚಿಕೆಯಾದ ಮುಕ್ತ ಅನುದಾನ ಗರಿಷ್ಠ ಶೇಕಡ 20ರಷ್ಟನ್ನು ಬಳಸಲು (ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 177 ಎಸ್‌ಎಫ್‌ಸಿ 2020, ದಿನಾಂಕ 29-06-2020) ಅವಕಾಶ ಕಲ್ಪಿಸಲಾಗಿದೆ.

2020-21ನೇ ಸಾಲಿಗೆ ವಿಜಯಪುರ ಮಹಾನಗರಪಾಲಿಕೆಗೆ 15ನೇ ಹಣಕಾಸು ಆಯೋಗದ ಅನುದಾನ ಒಟ್ಟು ಮೊತ್ತ ರೂ. 2022.00 ಲಕ್ಷ ಹಂಚಿಕೆ ಮಾಡಿದ್ದು, ಮೊದಲನೆಯ ಕಂತಿನ ಮುಕ್ತ ಅನುದಾನ (tied grants) ರೂ. 505.00 ಲಕ್ಷ ಬಿಡುಗಡೆಗೊಳಿಸಲಾಗಿದೆ. ಸದರಿ ಅನುದಾನದಲ್ಲಿ ಮುಕ್ತ ಅನುದಾನ ಶೇಕಡ 50ರಷ್ಟು ಅಂದರೆ ರೂ.1011.00 ಲಕ್ಷಗಳಲ್ಲಿ ಮಹಾನಗರಪಾಲಿಕೆಯು ನಗರದ ಅವಶ್ಯಕತೆಗನುಗುಣವಾಗಿ ಗರಿಷ್ಠ ಶೇಕಡ 20 ರಷ್ಟು ಮೊತ್ತ ರೂ. 202.20 ಲಕ್ಷವನ್ನು ರಸ್ತೆ ಅಭಿವೃದ್ಧಿಗಾಗಿ ಬಳಕೆ ಮಾಡಲು ಅವಕಾಶವಿದೆ.

15ನೇ ಹಣಕಾಸು ಆಯೋಗದ ಅನುದಾನದಡಿ 2020-21ನೇ ಸಾಲಿಗೆ ವಿಜಯಪುರ ಮಹಾನಗರಪಾಲಿಕೆಯ ರೂ. 202.20 ಲಕ್ಷಗಳ ಮೊತ್ತದ ರಸ್ತೆ ಅಭಿವೃದ್ಧಿಯ ಎರಡು ಕಾಮಗಾರಿಗಳ ಕ್ರಿಯಾ ಯೋಜನೆ ಅನುಮೋದನೆಯಾಗಿದ್ದು, ಸದರಿ ಕಾಮಗಾರಿಗಳಿಗೆ ಟೆಂಡರ್ ಕರೆಯಲು ಬಾಕಿ ಇದೆ.

**ವಿಜಯಪುರ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 2019-20ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಅನುದಾನದಡಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತಿವೆ :**

1. ವಾರ್ಡ್ ಸಂಖ್ಯೆ 16 ಗಾಂಧೀ ನಗರದಲ್ಲಿ ರಮೇಶ ದೊಡ್ಡಮನಿ ಮನೆಯಿಂದ ಹುನ್ನು ಚವ್ಹಾಣ ಮನೆಯವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.
2. ವಾರ್ಡ್ ಸಂಖ್ಯೆ 15 ರಾಘವೇಂದ್ರ ಗೌಡ್ರು ಮನೆಯಿಂದ ಸಿಂದಗಿ ನಾಕಾದವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು
3. ವಾರ್ಡ್ ಸಂಖ್ಯೆ 15 ದೇವೇಂದ್ರ ಸವಣೂರ ಮನೆಯಿಂದ ವಾಸುದೇವ ದವಾಖಾನೆಯವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು.
4. ನಾಗರಬಾವಡಿ ಅಂಗಡಿಯಿಂದ ಹಮಜಾ ಹುಸೇನಿ ದರ್ಗಾ ಮತ್ತು ಜೆ.ಬಿ.ಗಾರ್ಡ್‌ನಿಂದ ಮಹಾನಗರ ಪಾಲಿಕೆ ಆಯುಕ್ತರ ಕ್ವಾಟರ್ಸ್ ವರೆಗೆ ರಸ್ತೆ ಅಭಿವೃದ್ಧಿಪಡಿಸುವುದು.

**2019-20ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಡಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ವಿವರ:**

ವಿಜಯಪುರ ನಗರದ ಲಾಲ್ ಬಹಾದ್ದೂರ ಶಾಸ್ತ್ರೀ ಮಾರುಕಟ್ಟೆಯಿಂದ ನೆಹರು ಮಾರ್ಕೆಟ್ ಮಾರ್ಗವಾಗಿ ಎ.ಪಿ.ಎಂ.ಸಿವರೆಗಿನ ಶ್ರೀ ಅಟಲ್ ಬಿಹಾರಿ ವಾಜಪೇಯಿ ರಸ್ತೆಯನ್ನು ಸಿ.ಸಿ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವುದು.

(ಬಿ.ಎ ಬಸವರಾಜ)
ನಗರಾಭಿವೃದ್ಧಿ ಸಚಿವರು

ಸಂಖ್ಯೆ: ನಅಇ_295_ಎಸ್‌ಎಫ್‌ಸಿ_2020.